ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದಾರೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಅವರ ವರದಿಯಲ್ಲಿ ರಾಯಲಸೀಮೆಯಲ್ಲಿರುವ features ಆ ಪ್ರದೇಶದಲ್ಲಿವೆ ಎಂದು ಅಭಿಪ್ರಾಯ ಸೂಚಿಸಿರುವುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ವಲ್ಪ ನೆನಪಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಆ ಪ್ರದೇಶವನ್ನು ಸಾಕಷ್ಟು ಅಭಿವೃದ್ಧಿಮಾಡಬೇಕೆಂದು ಅವರ ಶಿಫಾರಸಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ನುಮಾರು ಎರಡು ವರ್ಷಗಳ ಹಿಂದೆ ಆ ಕೆರೆಗಳು ಆಗಬೇಕೆಂದು ಹೇಳಿದ ಮೇಲೆ ಮೂರು ಕೆರೆಗಳಿಗೆ ಅಂದಾಜು ತಯಾರುಮಾಡಿದ್ದಾರೆ. ಕೆಲವು ಸಾವಿರ ರೂಪಾಯಿಗಳಮೇಲೆ ಖರ್ಚು ಬೀಳುವುದಿಲ್ಲವೆಂದು ತಾವೇ ಒಂದು ಸಾರಿ ಹೇಳಿದಿರಿ ಎಂದು ನನ್ನ ನೆನಪು. ಅಂತೂ ಅಂದಾಜು ತಯಾರುಮಾಡಿ ಕಾರ್ಯಗತಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ.

District Board Road Works in Mysore Taluk taken over by Government (Progress).

Q.—515. **Sri SHIVANANJE GOWDA** (Mysore Taluk).—

Will the Government be pleased to state :—

the names of roads in Mysore Taluk which are taken over by them from the District Board ; the number of roads, works of which have been started and the reason for not starting the road works of the remaining roads ?

A.—**Sri Kadidal MANJAPPA** (Minister for Revenue and Public Works).—

The following two roads have been taken over for maintenance by the P. W. D. from the District Board, Mysore, in Mysore Taluk according to the recent order *re* : re-classification of roads :—

(*i*) Kadakola-Jayapura Road—10 miles, on 14-9-1953.

(*ii*) The road that joins Mysore-Yelwal Road from Sagarkatte—6 miles, on 16-9-1953.

The latter part of the question is not clear. If it refers to the roads taken over, necessary annual repair and other works in respect of them will be done in the usual course ; if it refers to new roads, the responsibility in that behalf is that of the District Board.

ಶ್ರೀ ಶಿವನಂಜೇಗೌಡ.—ಮೈಸೂರು ತಾಲ್ಲೂಕಿನಲ್ಲಿ ಕಡಕೊಳ-ಜಯಪುರ ರಸ್ತೆ 10 ಮೈಲಿ ಮತ್ತು ಸಾಗರಕಟ್ಟೆಯಿಂದ ಇಲವಾರ್ ರಸ್ತೆಗೆ ಸೇರುವ ರಸ್ತೆ 6 ಮೈಲಿ ಇವುಗಳನ್ನು ಮಾತ್ರ ಜಿಲ್ಲಾ ಬೋರ್ಡಿನಿಂದ ಸರ್ಕಾರಕ್ಕೆ ತೆಗೆದುಕೊಳ್ಳಲಾಗಿದೆಯೆಂದು ಹೇಳಿದೆ. ಆ ತಾಲ್ಲೂಕಿನಲ್ಲಿ ಈ ಎರಡು ರಸ್ತೆಗಳು ಮಾತ್ರ ದೊಡ್ಡ ರಸ್ತೆಗಳೆಂದು ಸರ್ಕಾರದ ಅಭಿಪ್ರಾಯವೆ ?

ಶ್ರೀ ಕಡಿದಾಳ್ ಮಂಜಪ್ಪ :—ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳ ಸ್ಕೈಕೆ ಈ ಎರಡು ರಸ್ತೆಗಳು ಪ್ರಾಮುಖ್ಯ ವಾದವೆಂಬ ನಲಹೆ ಜಿಲ್ಲಾ ಬೋರ್ಡ್ ಅಧ್ಯಕ್ಷರಿಂದಲೂ ಎಕ್ಸಿಕ್ಯೂಟಿವ್ ಇಂಜನಿಯರಿಂದಲೂ ಸಲಹೆ ಬಂತು ಅದರ ಮೇಲೆ ತೀರ್ಮಾನಮಾಡಿದೆ.

ಶ್ರೀ ಶಿವನಂಜೇಗೌಡ.—ಇದಕ್ಕಿಂತ ಮುಖ್ಯವಾದದ್ದು ಉದ್ದೂರುಪುರ-ಬಿದರಗೂಡು ರಸ್ತೆ 14 ಮೈಲಿ ಉದ್ದವಿದೆ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ರಸ್ತೆ ಎಷ್ಟು ಮೈಲಿ ಉದ್ದವಿದೆ ಎನ್ನುವುದರ ಮೇಲೆ ಪ್ರಾಮುಖ್ಯತೆಯನ್ನು ನಿರ್ಧಾರಮಾಡುವುದಕ್ಕಾಗುವುದಿಲ್ಲ. ಯಾವ ರಸ್ತೆಗಳು ಪ್ರಾಮುಖ್ಯವೆಂದು ಜಿಲ್ಲಾ ಬೋರ್ಡಿನವರು ಅಭಿಪ್ರಾಯಪಟ್ಟರೋ ಅವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಶಿವನಂಜೇಗೌಡ.—ಉದ್ದೂರು-ಬಿದರಗೂಡು ರಸ್ತೆಯನ್ನು ತಾವು ನೋಡಿದ್ದೀರಾ ?

ಅಧ್ಯಕ್ಷರು.—ಆ ರಸ್ತೆಗಳಿವೆಯೊ ?

ಶ್ರೀ ಶಿವನಂಜೇಗೌಡ.—ಇವೆ. ಇವಕ್ಕಿಂತ ಐದು ಮೈಲಿ ಉದ್ದ ಹೆಚ್ಚಾಗಿರುವ ರಸ್ತೆ. ಅದರಲ್ಲಿ ನಾನೂ ಅವರ ಜೊತೆಯಲ್ಲಿ ಪ್ರವಾಸ ಹೋದಾಗ ಕೆಸರಿನಿಂದ ಮೋಟಾರ್ ವ್ಯಾನ್ ಹೂತುಕೊಂಡಿದ್ದುದು ಮಂತ್ರಿಗಳಿಗೆ ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ. ಆದರೆ ಅಂಥಾ ರಸ್ತೆಗಳನ್ನೆಲ್ಲಾ ಸರ್ಕಾರದವರು ವಹಿಸಿಕೊಳ್ಳಬೇಕಾದರೆ, ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅದು ಸಾಧ್ಯವಿಲ್ಲ. ಎಲ್ಲೆಲ್ಲಿ ದೊಡ್ಡ ರಸ್ತೆಗಳು ಪ್ರಾಮುಖ್ಯವಾದ ರಸ್ತೆಗಳಿವೆಯೋ ಅವುಗಳನ್ನು ವಹಿಸಿಕೊಳ್ಳುತ್ತಾರೆ.

ಶ್ರೀ ಶಿವನಂಜೇಗೌಡ.—ಉತ್ತರದಲ್ಲಿ ಕೊಟ್ಟಿರುವ ಎರಡು ರಸ್ತೆಗಳಲ್ಲೂ ಅಷ್ಟು ಬಸ್ ಸಂಚಾರವಿಲ್ಲ. ಆದರೆ ನಾನು ಈಗ ಹೇಳಿದ ರಸ್ತೆಯಲ್ಲಿ ತಾವೇ ಪ್ರವಾಸ ಹೋದಾಗ ಮೋಟಾರು ಹೂತುಕೊಳ್ಳಲಿಲ್ಲವೇ ? ಇದಕ್ಕೆ ಏನು ಜವಾಬು ಹೇಳುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಜಿಲ್ಲಾ ಬೋರ್ಡ್ ಅಧ್ಯಕ್ಷರ ಮತ್ತು ಎಗ್ಜಿಕ್ಯೂಟಿವ್ ಇಂಜನಿಯರವರ ನಲಹೆಯ ಮೇಲೆ ಈ ಎರಡು ರಸ್ತೆಗಳನ್ನೂ ತೆಗೆದುಕೊಳ್ಳಲಾಯಿತು. ಆದರೆ ತಾವು ಅವಕ್ಕಿಂತ ಇದು ಪ್ರಾಮುಖ್ಯವಾದುದು ಇದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೀರಿ. ಇದನ್ನು ಪರಿಶೀಲನೆಮಾಡುತ್ತೇವೆ.

ಶ್ರೀ ಶಿವನಂಜೇಗೌಡ.—ಸಂತೋಷ.

Channel in Anekal Taluk to lend waters from Bellandur Tank to Doddakere.

Q.—538. **Srimathi LAKSHMIDEVI RAMANNA** (Hoskote—Anekal).—

Will the Government be pleased to state :—

(*a*) the number and names of major and minor tanks in Anekal taluk that were restored last year ;

(SM. LAKSHMIDEVI RAMANNA.)

(*b*) whether it has come to their notice that the tanks of Huskur, Gulimangala, Agrahar, and Singenagrahar have silted up ;

(*c*) when the Mutthanallur tank was restored ;

(*d*) how many years ago, the Settihalli tank (Kadukere) breached ;

(*e*) whether it has come to their notice that petitions have been submitted requesting them to lead the waters through a channel now wastefully flowing from waste weir of Bellandur Tank *via* Varthur tank to Doddakere of Sarjapur ;

(*f*) what is the opinion of the Engineers in this matter ?

A.—**Sri Kadidal MANJAPPA** (Minister for Revenue and Public Works).—

(*a*)	Major	...	1
	Minor	...	5

Major tank :—Neralur Doddakere.

Minor tank :—Billapur tank Hosasandra Hongekere Gopanahally tank Bhaktipura Gramadakere Chikkaneggundi tank.

(*b*) Yes.

(*c*) In the year 1903 as per the tank register.

(*d*) Information is not readily available.

(*e*) Yes.

(*f*) That the levels do not permit such a course.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಹುಸ್ಕೂರು, ಗುಲಿಮಂಗಲ, ಅಗ್ರಹಾರ ಮತ್ತು ಸಿಂಗೇನ ಅಗ್ರಹಾರ ಕೆರೆಗಳಲ್ಲಿ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳಲಾಗಿದೆ. ಅದನ್ನು ತೆಗೆಸುವುದಕ್ಕೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಧ್ಯಕ್ಕೇನೂ ಮಾಡಿಲ್ಲ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಸರ್ಕಾರದವರಲ್ಲಿ ಬುಲ್‌ಡೋಜರುಗಳಿರುವುದರಿಂದ ಇವುಗಳ ಮೂಲಕ ಮೈನರ್ ಕೆರೆಗಳ ಹೂಳು ತೆಗೆಸಿದರೆ ವ್ಯವಸಾಯಕ್ಕೆ ಸಹಾಯವಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಬುಲ್‌ಡೋಜರ್‌ಗಳ ಮೂಲಕ ಹೂಳು ತೆಗೆಸುವುದು ಕಡಮೆ ಖರ್ಚಿನಿಂದಾಗುವುದಿಲ್ಲವೆಂಬುದು ಸರ್ಕಾರದ ಅಭಿಪ್ರಾಯ ; ಆದರೂ ತಾವು ಹೇಳಿದ ವಿಷಯದಲ್ಲಿ ವರದಿಯನ್ನು ತರಿಸುತ್ತೇವೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಮುತ್ತಾನಲ್ಲೂರು ಕೆರೆಯನ್ನು 50 ವರ್ಷಗಳಿಂದ ರಿಪೇರಿ ಮಾಡಿಲ್ಲವೆಂದು ಹೇಳಿದ್ದೀರಿ. ಇದು ದೊಡ್ಡ ಕೆರೆ, ಇದರ ಕೆಳಗೆ ಬೇಕಾದಷ್ಟು ಗದ್ದೆ ವ್ಯವಸಾಯವಾಗುತ್ತದೆ. ಇಂಥ ಕೆರೆ ಮೇಲೆ ಬಿದ್ದು ನೀರು ಹರಿದು ಬಾವಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಹೋದವರ್ಷದ ಹಾಗೆ ಮಳೆ ಬಿದ್ದರೆ ಆ ಕೆರೆಯ ಏರಿಗೆ ಅನಾಹುತವಾದರೆ ನೂರಾರು ಕುಟುಂಬಗಳು ಮುಳುಗಿ ಹೋಗುವುದಲ್ಲದೆ ನೂರಾರು ಎಕರೆ ಗದ್ದೆ ಹಾಳಾಗುತ್ತದೆ. ಆದುದರಿಂದ ಈ ವರ್ಷ ಅದನ್ನು ಮುಚ್ಚುವುದಕ್ಕೆ ಏರ್ಪಾಡು ಮಾಡುತ್ತೀರಾ ?

(ಉತ್ತರವಿಲ್ಲ.)

ಶ್ರೀ ಆರ್. ಮುನಿಸ್ವಾಮಯ್ಯ.—ಬೆಳ್ಳಂಡೂರು ಕೆರೆಯ ಕೋಡಿ ನೀರು ಸರ್ಜಾಪುರದ ಕೆರೆಗೆ ಹರಿಯುವಂತೆ ಮಾಡಲು ಸರ್ವೆಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ವೆಮಾಡಿಲ್ಲ ; ಅದು ಸಾಧ್ಯವಿಲ್ಲವೆಂಬ ಅಭಿಪ್ರಾಯವಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಕೆಲವು ವರ್ಷಗಳಿಂದ ಈ ರೀತಿಯಾಗಿ ಬೆಳ್ಳಂಡೂರು ಕೆರೆಯ ನೀರು ವ್ಯರ್ಥವಾಗಿ ಹರಿದು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.— ಬಂದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.— ಹಾಗಾದರೆ ಅದನ್ನು ಸರಿಯಾಗಿ ಸರ್ವೆ ಮಾಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ಬಂದಿರುವ ವರದಿಯ ಪ್ರಕಾರ 'levels do not permit' ಎಂದು ಗೊತ್ತಾಗಿದೆ. ತಾವು ಹೇಳುವುದು ಸೂಕ್ತವಾಗಿದ್ದು ಸಾಧ್ಯವಾದರೆ ಪರಿಶೀಲಿಸುತ್ತೇವೆ.

Mr. SPEAKER.—Question No. 632.

(Sri G. M. Annaiyappa did not rise.)

Mr. SPEAKER.—Next question.

ಶ್ರೀ ಬಿ. ಹುಚ್ಚೇಗೌಡ.— ಸದಸ್ಯರು ಹಾಜರಿದ್ದಾರೆ.

Mr. SPEAKER.—He has no supplementaries, I think.

Bridge across Kundilihalla.

Q.—667. **Sri H. K. SIDDIAH** (Belur—Scheduled Castes).—

Will the Government be pleased to state :—

(*a*) whether it has come to their notice that the construction of a bridge across the Kundilihalla which is on the road leading to Haluvagilu Village, Hassan Kasaba, is being urged by the raiyats of that region for the last ten years ;

(*b*) whether the estimate for this has been prepared ; if so, whether this work will be executed early ?

A.—**Sri Kadidal MANJAPPA.**—

(*a*) Yes.

(*b*) An estimate amounting to Rs. 4,500 for this work has been sanctioned. The work is in progress.